**ದಿಃ02-12-2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

**ಪಾಟಿಸವಾಲು ಃ ಎದುರುದಾರರ ಪರ ಶ್ರೀ. ವಕೀಲರಿಂದ ಃ**

ಮೂಲ ಅರ್ಜಿ ಸಲ್ಲಿಸಿದಾಗ ಪ್ರತಿವಾದಿಗಳನ್ನು ಪಾರ್ಟಿ ಮಾಡಿಲ್ಲ ಎಂದರೆ ಸರಿ . ನನ್ನ ಅರ್ಜಿಯಲ್ಲಿ ನನ್ನ ತಂದೆಗೆ ಹೆಂಡತಿ ಮಕ್ಕಳಿದ್ದಾರೆ ಎಂದು ವಿವರಣೆ ಎಂದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಹೆಂಡತಿ ಮಕ್ಕಳು ಇರುವ ವಿಚಾರಣೆಯನ್ನು ಮೂಲ ಅರ್ಜಿಯಲ್ಲಿ ಮರೆಮಾಚಿದ್ದೇನೆ ಎಂದರೆ ಸರಿಯಲ್ಲ. ಇದನ್ನು ಪ್ರೊಬೇಟ್ ಕೊಡಬೇಕೆಂದು ಹಾಕಿದ್ದೇನೆ ಎಂದರೆ ಸರಿ . 2 ವಿಲ್ ಗಳಲ್ಲಿ ಎಕ್ಸಿಕ್ಯೂಟರ್ ಅಪಾಯಿಂಟ್ಮೆಂಟ್ ಮಾಡಿದ್ದಾರಾ ಎಂದರೆ ಸಾಕ್ಷಿದಾರ ಗೊತ್ತಿಲ್ಲ ಎಂದು ನುಡಿಯುತ್ತಾನೆ. ಸಾಕ್ಷಿದಾರ ಮುಂದುವರೆದು ಅದಕ್ಕೆ ಸಾಕ್ಷಿದಾರ ಸಹಿ ಮಾಡಿದ್ದಾರೆ ಎಂದು ಹೇಳುತ್ತಾನೆ. ವಿಲ್ ಪ್ರಕಾರ ಎಕ್ಸಿಕ್ಯೂಟರ್ ಆಗಿ ನನಗೆ ಹಕ್ಕು ಇದೆ. ನೀವು ಎಕ್ಸಿಕ್ಯೂಟರ್ ಆಗಿ ಕ್ಲೈಮ್ ಮಾಡುತಿದ್ದಿರಾ ಅಥವಾ ಬೆನಿಫಿಷರ್ ಆಗಿ ಕ್ಲೈಮ್ ಮಾಡುತ್ತಿದ್ದಿರಾ ಎಂದರೆ ಸಾಕ್ಷಿದಾರ ವಿಲ್ ನಲ್ಲಿ ಏನು ಆಸ್ತಿ ಇದೆ ಅದು ನನಗೆ ಬರಬೇಕು ಎಂದು ಹಾಕಿದ್ದೇನೆ ಎಂದು ಹೇಳುತ್ತಾನೆ. ನಾನು ಅರ್ಜಿ ಹಾಕಿದ್ದು ಕಲಂ 276 ಇಂಡಿಯನ್ ಸೆಕ್ಸೆಷನ್ ಆಕ್ಟ ಎಂದರೆ ಸರಿ . ಇದರಲ್ಲಿ ಆಸ್ತಿಯ ವ್ಯಾಲ್ಯೂ ಮತ್ತು ನಿಮಗೆ ಎಷ್ಟು ಬರಬೇಕು ಎಂದು ನಮೂದಿಸಿದ್ದೀರಾ ಎಂದರೆ ಸಾಕ್ಷಿದಾರ ನಮೂದಿಸಿಲ್ಲ ಎಂದು ಹೇಳುತ್ತಾನೆ.

ಎದುರುದಾರರ ಪರ ವಕೀಲರು ಈ ಸಂದರ್ಭದಲ್ಲಿ ಅರ್ಜಿದಾರನು ಹಾಕಿದ ಅರ್ಜಿ ಕಾನೂನಿನ ಅಡಿಯಲ್ಲಿ ಊರ್ಜಿತ ಆಗುವುದಿಲ್ಲಎಂದು ಹೇಳಿ

ಕೇಸಿನಲ್ಲಿ ವಾದ ಮಂಡಿಸಲು ಅನುಮತಿ ಕೋರಿದ್ದಾರೆ, ಆದ್ದರಿಂದ ಪಾಟೀಸವಾಲು ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ ಇದೆ,**

**(ಸಾಬಪ್ಪ)**
**9ನೇ ಅಪರ ನಗರ ಸಿವಿಲ್ ಮತ್ತು ಸತ್ರ**
**ನ್ಯಾಯಾಧೀಶರು, ಬೆಂಗಳೂರು.**